**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು</u>**

**<u>ಹುಕ್ಕೇರಿ.</u>**

CC No.1371/2018
CW-7/ PW-2

ಹೆಸರು : ಪ್ರೇಮ ಸಾಗರ ಕೊಚ್ಚರಗಿ
ವಯಸ್ಸು : 45 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ಹುಲ್ಲೋಳಿ, ತಾಃ ಹುಕ್ಕೇರಿ.

**(ದಿನಾಂಕಃ09.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**<u>ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ</u>**

**1.** ಚಾಸಾ-1 ಗುರಪ್ಪ ನನ್ನ ತಂದೆ. ಆರೋಪಿತರು ನನ್ನ ತಾಯಿ ಗೌರವ್ವ ಮತ್ತು ನನಗೆ ಯಾವುದೇ ಅವಮಾನ ಮಾಡಿರುವುದಿಲ್ಲ, ನಮ್ಮ ಸೀರೆ ಹಿಡಿದು ಎಳೆದಾಡಿಲ್ಲ ಹಾಗೂ ನನ್ನ ತಂದೆಗೆ ಚಪ್ಪಲಿ, ಕಲ್ಲು ಮತ್ತು ಕೈಗಳಿಂದ ಹೊಡಿ ಬಡಿ ಮಾಡಿಲ್ಲ, ಅವ್ಯಾಚ್ಯ ಶಬ್ದಗಳಿಂದ ಬೈದಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಸರಕಾರಿ ಸಹಾಯಕ ಅಭಿಯೋಜಕರಿಂದ –</u>**

2. ದಿನಾಂಕ 25-08-2018 ರಂದು ಬೆಳಿಗ್ಗೆ 10-00 ಗಂಟೆಗೆ ನನ್ನ ತಂದೆ ಊಟ ಮಾಡಿ ಮನೆಯಲ್ಲಿದ್ದಾಗ ಪಾಮಲದಿನ್ನಿಯ ಈರಪ್ಪ, ಯಮನಪ್ಪ ರಕ್ಷಿ ಹಾಗೂ ಚನ್ನಬಸಪ್ಪ ಯಮನಪ್ಪ ರಕ್ಷಿ ಬಂದು ನನ್ನ ತಂದೆಯ ಜೊತೆ ಹೊಲದ ಸೀಮೆಯ ವಿಷಯ ಮಾತನಾಡುವುದು ಇದೆ, ಸಿದ್ದರೂಢ ಮಠದ ಹತ್ತಿರ ಹಿರಿಯರು ಕೂಡಿದ್ದಾರೆ, ಬಾ ಎಂದು ನನ್ನ ತಂದೆಯನ್ನು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಅಲ್ಲಿ ಎಲ್ಲಾ

ಆರೋಪಿತರು ನನ್ನ ತಂದೆಗೆ ಏಕಾಏಕಿ ಎಳೆದುಕೊಂಡು, ಕೆಂಪಣ್ಣ, ಬಾಳಪ್ಪ ಮತ್ತು ಗೋಪಾಲ, ಸದಾಶಿವ ಎಲ್ಲರೂ ಸೇರಿ ನನ್ನ ತಂದೆಯ ಎರಡೂ ಕೈಗಳನ್ನು ಹಗ್ಗದಿಂದ ಕಟ್ಟಿದ್ದರು ಎಂದರೆ ಸರಿಯಲ್ಲ. ಸದಾಶಿವ ಚಪ್ಪಲಿಯಿಂದ ನನ್ನ ತಂದೆಗೆ ಬಡಿದ ಎಂದರೆ ಸರಿಯಲ್ಲ. ಅಲ್ಲೆ ಇದ್ದ ಮಹಾದೇವಿ ಮತ್ತು ಅವರ ಮಗಳು ರೇಣುಕಾ ತಮ್ಮ ಕಾಲಲ್ಲಿದ್ದ ಚಪ್ಪಲಿಯಿಂದ ಮುಖಕ್ಕೆ, ತಲೆಗೆ ಮತ್ತು ಎರಡೂ ಕಿವಿಗಳಿಗೆ ನನಗೆ ಹೊಡೆದರು ಎಂದರೆ ಸರಿಯಲ್ಲ. ಆಗ ನನ್ನ ತಂದೆ ಚೀರಾಡುವ ಬಾಯಿ ಸಪ್ಪಳ ಕೇಳಿ ನಾನು ಮತ್ತು ನನ್ನ ತಾಯಿ ಗೌರವ್ವ ಇಬ್ಬರೂ ಕೂಡಿ ಓಡಿ ಬಂದು ಬಿಡಿಸಲು ಬಂದಾಗ, ಗೋಪಾಲ, ಕೆಂಪಣ್ಣ, ಬಾಳಪ್ಪ ನನ್ನ ತಾಯಿತು ಕೈಹಿಡಿದು ಎಳೆದಾಡಿ, ಅವಳ ಸೀರೆ ಸೆರಗನ್ನು ಹಿಡಿದು ಎಳೆದಾಡಿ ಅವಮಾನ ಮಾಡಿದರು ಎಂದರೆ ಸರಿಯಲ್ಲ. ನನಗೆ ಸದಾಶಿವ ದೂಡಿದ ಎಂದರೆ ಸರಿಯಲ್ಲ. ನನ್ನ ತಂದೆ ಕೈಗೆ ಕಟ್ಟಿದ ಹಗ್ಗದ ಸಮೇತ ಸೊಸೈಟಿಗೆ ಕೆಂಪಣ್ಣ ಮತ್ತು ಮಹಾದೇವಿ ಇಬ್ಬರೂ ಹಗ್ಗ ಹಿಡಿದು ಎಳೆದುಕೊಂಡು ಹೋಗಿ ಸೊಸೈಟಿಯ ಕಿಡಕಿಗೆ ಕಟ್ಟಿ ಹಾಕಿ ಎಲ್ಲಾ ಆರೋಪಿತರು ನನ್ನ ತಂದೆಗೆ ಚಪ್ಪಲಿ, ಕಲ್ಲು ಮತ್ತು ಕೈಗಳಿಂದ ಹೊಡಿ ಬಡಿ ಮಾಡಿದರು ಎಂದರೆ ಸರಿಯಲ್ಲ. ಆಗ ಚಾಸಾ-9 ರಿಂದ ಚಾಸಾ-13 ರವರು ಬಂದು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಹುಕ್ಕೇರಿ ಸರಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದು, ನನ್ನ ತಾಯಿ ಖಾಸಗಿ ದವಾಖಾನೆಯಲ್ಲಿ ತೋರಿಸಿಕೊಂಡಳು ಎಂದರೆ ಸರಿಯಲ್ಲ.

3. ಈ ಬಗ್ಗೆ ನನ್ನ ತಂದೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಈಗ 3 ದಾಖಲೆ ನೋಡುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಸ್ಥಳ ಪಂಚನಾಮೆ, ಕಚ್ಚಾ ನಕಾಶೆ ಮತ್ತು ಪೋಟೋ ಆಗಿದ್ದು ಅದನ್ನು ನಿ.ಪಿ-2 ಮತ್ತು ನಿಪಿ-3 ಎಂದು ಸಾಕ್ಷಿ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೊದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು. ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನಾನು ಮತ್ತು ಆರೋಪಿತರು ರಾಜಿ ಮಾಡಿಕೊಂಡಿದ್ದೇವೆ ಎಂದರೆ ನಿಜ.

**<u>ಪಾಟಿ ಸವಾಲುಃ ಆರೋಪಿ ಪರ ಏನು ಇಲ್ಲ ಎಂದು ಹೇಳುತ್ತಾರೆ.</u>**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**Sd/-**
**(ಆದಿತ್ಯ ಆರ್. ಕಲಾಲ್)**
**ಸಿ ಜೆ ಮತ್ತು ಜೆ.ಎಂ.ಎಫ್.ಸಿ, ಹುಕ್ಕೇರಿ.**